ಇ.ಸಿ.ಎ. 1/2022
ಪಿ.ಡಬ್ಲ್ಯೂ : 02

**ದಿನಾಂಕ 24-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ 1 ನೇ ಎದುರುದಾರರ ಪರ ವಕೀಲರಿಂದ**

ನಾನು 20 ವರ್ಷಗಳಿಂದ ಬೋಟ್ ನಲ್ಲಿ ಮೀನುಗಾರಿಕೆ ಕೆಲಸ ಮಾಡುತ್ತಿದ್ದೇನೆ . ನಾನು ಹಲವಾರು ಮಾಲೀಕರ ಬೋಟ್ ನಲ್ಲಿ ಕೆಲಸ ಮಾಡುತಿದ್ದೆ. ಈಗ ನಾನು ಯಾವುದೇ ಮಾಲೀಕರ ಬಳಿ ಕೆಲಸ ಮಾಡುತ್ತಿಲ್ಲ. ನಾನು ತೌಫಿಕ್ ಎನ್ನುವವರ ಬಳಿ ಕೆಲಸ ಮಾಡುತ್ತಿದ್ದು ಅವರ ಬೋಟ್ ಬೆಳಿಗ್ಗೆ ಹೋಗಿ ಸಾಯಂಕಾಲ ಬರುತ್ತಿದ್ದೆ ಅದಕ್ಕೆ ಕರೆ ಬೋಟ್ ಎಂದು ಕರೆಯುತ್ತಾರೆ. ನಾನು ಅವರ ಬಳಿ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲೆ ಇಲ್ಲ . ಬೋಟ್ ಸಂಖ್ಯೆ ಃ 4492 ಆಗಿರುತ್ತದೆ .

ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಅದನ್ನು ತಯಾರಿಸಿದ ನಂತರ ನಾನು ಓದಿ ತಿಳಿದುಕೊಂಡಿರುತ್ತೇನೆ . ಶೇಖರ , ಸಂಜೀವ ರವರ ಪರಿಚಯ ಇದೆ . ನನಗೆ ತಿಂಗಳಿಗೆ ರೂ 50000/- ಸಂಬಳ ಕೊಡುತಿದ್ದ ಬಗ್ಗೆ ದಾಖಲೆ ಇಲ್ಲ . ನನಗೆ ನಗದಿನ ರೂಪದಲ್ಲಿ ಸಂಬಳ ಕೊಡುತ್ತಿದ್ದರು . ನಾನು ಬ್ಯಾಂಕ್ ನಲ್ಲಿ ವ್ಯವಹಾರ ಮಾಡುವುದಿಲ್ಲ. ಕಾರ್ಮಿಕ ಇಲಾಖೆಯಲ್ಲಿ ನಾನು ಕೆಲಸ ಮಾಡುತ್ತಿದ್ದ ಬಗ್ಗೆ ಅರ್ಜಿಯನ್ನು ಕೊಟ್ಟು ಸಂಬಂಧಪಟ್ಟ ರಿಜಿಸ್ಟರ್ ನಲ್ಲಿ ನಮೂದು ಮಾಡಿಸಿಲ್ಲ . 1 ನೇ ಎದುರುದಾರರು ನಾನು ಕೆಲಸ ಮಾಡುತ್ತಿದ್ದ ಬಗ್ಗೆ ಹಾಜರಾತಿ ಪುಸ್ತಕ ಇಟ್ಟಿರುವುದಿಲ್ಲ .

ನನ್ನ ಸಹೋದೊಯೀಗಿ ವಿಜಯ ಕುಂದರ್ ಮೃತ ಪಟ್ಟಿದ್ದು ಅವರು ಯಾವ ಕಾರಣದಿಂದ ಮೃತ ಪಟ್ಟರು ಎಂದು ಗೊತ್ತಿಲ್ಲ . ನನ್ನ ಸಹೋದ್ಯೋಗಿ ವಿಜಯ ಕುಂದರ್ ಹೃದಯಘಾತದಿಂದ ಮೃತ ಪಟ್ಟ ರು ಎಂದರೆ ಸರಿಯಲ್ಲ . ಬೋಟ್ ಸಮುದ್ರದಲ್ಲಿ ಹೋಗುವಾಗ ನನ್ನ ಸಹೋದ್ಯೋಗಿ ವಿಜಯ ಕುಂದರ್ ಮೃತ ಪಟ್ಟಿರುತ್ತಾರೆ . ಬೋಟ್ ನಲ್ಲಿ ಹೋಗುವಾಗ ನನ್ನ ಸಹೋದ್ಯೋಗಿ ವಿಜಯ ಕುಂದರ್ ಮೃತಪಟ್ಟಿಲ್ಲ ಎಂದರೆ ಸರಿಯಲ್ಲ . ನಾನಾಗಲೀ , ವಿಜಯ ಕುಂದರ್ ಆಗಲೀ , ಶೇಖರ ಮತ್ತು ಸಂಜೀವಾಗಲೀ ಖಾಯಂ ನೌಕರರಲ್ಲ ಎಂದರೆ ಸರಿ. ನಾನು ಹೇಳುವ ರೀತಿ ತೌಫಿಕ್ ನನಗೆ ರೂ 50000 ಸಂಬಳ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ . ವಿಜಯ ಕುಂದರ್ ಹೆಂಡತಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ನಾನಾಗಲೀ , ವಿಜಯ ಕುಂದರ್ ಆಗಲೀ ತೌಫಿಕ್ ಬಳಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ .

**ಪಾಟೀ ಸವಾಲು ಃ 2 ನೇ ಎದುರುದಾರರ ಪರ ವಕೀಲರಿಂದ**

1 ವರ್ಷಕ್ಕೆ 9 ತಿಂಗಳು ಮೀನುಗಾರಿಕಾ ಕೆಲಸ ಸಿಗುತ್ತದೆ. ಬೋಟಿಂಗ್ ವ್ಯವಹಾರ ನೋಡಿಕೊಳ್ಳಲು ಒಬ್ಬ ಮ್ಯಾನೇಜರ್ ಇರುತ್ತಾರೆ ಎಂದರೆ ಸರಿ . ಅವರು ದಿನಕ್ಕೆ ಎಷ್ಟು ಕಿಲೋ ಮೀನುಗಳು ಸಿಕ್ಕಿತು , ಎಷ್ಟು ಖರ್ಚು ಆಯಿತು ಮತ್ತು ಎಷ್ಟು ಲಾಭವಾಯಿತು ಎಂದು ಲೆಕ್ಕ ಇಡುತ್ತಾರೆ ಎಂದರೆ ಸರಿ . ನಾನು ಬೋಟ್ ನಲ್ಲಿ ಡ್ರೈವರ್ ಹೇಳಿದಾಗ ಬಲೆಯನ್ನು ಸಮುದ್ರಕ್ಕೆ ಹಾಕುತ್ತೇನೆ ನಂತರ ಬಲೆಯನ್ನು ಎಳೆದುಕೊಂಡು ಅದರಲ್ಲಿ ಸಿಕ್ಕಿದ ಮೀನುಗಳನ್ನು ಬೇರ್ಪಡಿಸುತ್ತೇನೆ . ಬೋಟ್ ನಲ್ಲಿ ಯಾರು ಯಾರು ಕೆಲಸ ಮಾಡುತ್ತಾರೆ ಎಂದು ಮ್ಯಾನೇಜರ್ ಬರೆದಿಡುತ್ತಾರೆ ಎಂದರೆ ಸರಿ . ಸದ್ರಿ ಮ್ಯಾನೇಜರ್ ರವರು ಲೆಕ್ಕವನ್ನುಮೀನುಗಾರಿಕೆ ಅವದಿ ಮುಗಿದ ನಂತರ ಮಾಡುತ್ತಾರೆ ಎಂದರೆ ಸರಿ . ನಂತರ ಮ್ಯಾನೇಜರ್ ರವರು ಆ ಮೀನುಗಾರಿಕೆ ಅವದಿಯಲ್ಲಿ ಎಷ್ಟು ಲಾಭವಾಯಿತು ಎಂದು ಲೆಕ್ಕ ಮಾಡಿ ಅದರಲ್ಲಿ ಮಾಲೀಕರ ಖರ್ಚು ನ್ನು ಕಳೆದು ಉಳಿಕೆ ಹಣದಲ್ಲಿ ಮಾಲೀಕರ ಲಾ ಭವನ್ನು ಕಳೆದು ನಂತರ ಬಂದ ಹಣದಲ್ಲಿನಮಗೆ ಇಷ್ಟು ಪರ್ಸೆಂಟ್ ಎಂದು ಹಂಚುತ್ತಾರೆ ಎಂದರೆ ಸರಿ . ಖರ್ಚು ನ್ನು ಕಳೆದು ಉಳಿದ ಹಣದಲ್ಲಿ 70 ಪರ್ಸೆಂಟ್ ಮಾಲೀಕರಿಗೆ 30 ಪರ್ಸೆಂಟ್ ಕೆಲಸಗಾರರಿಗೆ ಸಿಗುತ್ತದೆ . ಆದ್ದರಿಂದ ತಿಂಗಳಿಗೆ ನನಗೆ ರೂ 50000 ಸಂಬಳ ಕೊಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .
( ಉಳಿಕೆ ಪಾಟಿ ಸವಾಲನ್ನು 1ನೇ ಎದುರುದಾರರು ಪರ ವಕೀಲರು ಮಾಡಿರುವ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.